ಪಿ.ಎನ್.ಶ್ರೀವತ್ಸ, ಬೆಂಗಳೂರು

*ಪ್ರಾಣಿಪಕ್ಷಿಗಳು ಮನುಷ್ಯರಿಗಿಂತ ಆರೋಗ್ಯವಾಗಿರಲು ಕಾರಣವೇನು?*



ಓಡಾಡತ್ವೆ, ಜೀರ್ಣವಾಗುವಷ್ಟು ಮಾತ್ರ ತಿನ್ನುತ್ವೆ, ಸಾಲ ಮಾಡಲ್ಲ, ಹೊಟ್ಟೆಕಿಚ್ಚು ಪಡಲ್ಲ, ಅತ್ತೆ ಕಾಟ ಇಲ್ಲ, ಟ್ಯಾಕ್ಸ್ ಕಾಟ ಇಲ್ಲ..........!

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.

*ಅಧ್ಯಾಪಕರು ವಿದ್ಯಾರ್ಥಿಗಳನ್ನು ಪರೀಕ್ಷಿಸುತ್ತಾರೆ; ಆದರೆ ಅಧ್ಯಾಪಕರನ್ನು ಯಾರು ಪರೀಕ್ಷಿಸುತ್ತಾರೆ?*

ವಿದ್ಯಾರ್ಥಿಗಳೇ! ಅವರ ಡ್ರೆಸ್ಸು, ವಿವಿಧ ಭಂಗಿಗಳು, ಆಚಾರ, ವಿಚಾರ, ನಡೆ, ನುಡಿ ಎಲ್ಲವನ್ನೂ ಚೆನ್ನಾಗಿ ಪರೀಕ್ಷಿಸಿಯೇ ಆಡಿಕೊಳ್ಳುವುದು!

ಎಂ.ಎನ್. ಸೋಮಶೇಖರ್, ಮೈಸೂರು

*ಹನುಮಂತನು ಸಂಜೀವಿನಿ ಪರ್ವತವನ್ನೇ ಹೊತ್ತು ತರುವಂತಹ ಶಕ್ತಿಶಾಲಿಯಾಗಲು ಯಾವ ಗರಡಿಯಲ್ಲಿ ಸಾಧನೆ ಮಾಡಿದನು?*

ಭಾರತ್ ಅರ್ತ್ ಮೂವರ್ಸ್‌ನ ಗರಡಿಯಲ್ಲಿ!

ಶಿವಮೊಗ್ಗ ರಮೇಶ್, ಮೈಸೂರು

*ಪರಸ್ಪರ ಎದುರಾದಾಗ ಬೊಗಳುವ ನಾಯಿಗಳಿಗೂ, ಅವಾಚ್ಯ ಶಬ್ದಗಳಿಂದ ಬೈದಾಡುವ ರಾಜಕಾರಣಿಗಳಿಗೂ ಏನು ವ್ಯತ್ಯಾಸ?*




ಒಂದೇ ವ್ಯತ್ಯಾಸ – ನಾಯಿಗಳ ಬೊಗಳುವಿಕೆಯನ್ನು ವಾಹಿನಿಗಳು ಬ್ರೇಕಿಂಗ್ ನ್ಯೂಸ್ ಎಂದು ತೋರಿಸುವುದಿಲ್ಲ!

ಪಿ.ಜೆ. ರಾಘವೇಂದ್ರ, ಮೈಸೂರು

*ರಾಜಕೀಯ ಸನ್ಯಾಸಕ್ಕೂ, ಸನ್ಯಾಸಿಗಳ ರಾಜಕೀಯಕ್ಕೂ ಏನು ವ್ಯತ್ಯಾಸ?*

ಒಂದು ಹತಾಶೆ, ಇನ್ನೊಂದು ದುರಾಶೆ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

*ಮಠದ ಸ್ವಾಮಿಗಳು ಯೌವನವನ್ನು ಹೇಗೆ ನಿಭಾಯಿಸುತ್ತಾರೆ?*

ರಕ್ತದ ರುಚಿ ಕಾಣದ ಹುಲಿ ಸಾಧುಪ್ರಾಣಿಯಾಗಿರುವುದಿಲ್ಲವೇ.... ಇವರೂ ಹಾಗೇ!

ಹಾಡ್ಯ ಬಿ. ಜಯಾನಂದ, ಮೈಸೂರು

*ಸ್ಲಿಮ್ ಈಸ್ ಬ್ಯೂಟಿಫುಲ್; ಡ್ರಮ್ ಈಸ್?*

ಹೌಸ್‌ಫುಲ್!

ಕವಿತಾ ನಾಗರಾಜು, ಮದ್ದೂರು

*ಹುಡುಗಿಯರ ಮನಸ್ಸು ಚಂಚಲ ಅಂತಾರೆ. ಹುಡುಗರ ಮನಸ್ಸು?*

ಚಂಚಲೆಯರ ನಡೆ ನೋಡುವುದರಲ್ಲಿ ಅಚಲ.

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ

*ಆರೋಗ್ಯಕ್ಕೆ ಮಾರಕವಾಗಿದ್ದರೂ ಕೆಲವು ಹುಡುಗಿಯರು ಬಿಗಿಯುಡುಪು ಧರಿಸುತ್ತಾರಲ್ಲಾ...?*

ಯಾರ ಆರೋಗ್ಯಕ್ಕೆ? ಆ ಉಡುಪು, ತೊಟ್ಟವರಿಗಿಂತ, ಅದರತ್ತ ನೋಟ ನೆಟ್ಟವರ ಆರೋಗ್ಯಕ್ಕೇ ಮಾರಕವಂತೆ!

ಗೀತಾ ಬರ್ಲ, ಬೆಂಗಳೂರು

*ಮದುವೆಯಾಗದೆ ಹುಚ್ಚು ಬಿಡದು, ಹುಚ್ಚು ಬಿಡದೆ ಮದುವೆಯಾಗದು ಎನ್ನುತ್ತಾರಲ್ಲಾ, ಹೀಗಾದರೆ ಹೇಗೆ?*

ರಿಯಾಲಿಟಿ ಷೋ ಮೂಲಕ ಮದುವೆ ಆಗಿಬಿಡಿ. ಸಂಗಾತಿಯ ಜೊತೆಜೊತೆಗೇ ಹುಚ್ಚೂ ಹೋಗಿಬಿಡುತ್ತೆ!

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್

*ಭೂಮಿ ಸುಂದರವಾಗಿ ಕಾಣಲು ಹಚ್ಚ ಹಸಿರಿರಬೇಕು. ಹೆಣ್ಣು ಸುಂದರವಾಗಿ ಕಾಣಲು ಏನಿರಬೇಕು?*

ಸ್ವಚ್ಛ ನಗೆಯೊಂದೇ ಸಾಕು.

ಆರ್. ನಾಗರಾಜ್, ಗೊರೂರು

*ಹೆಂಡತಿ ಅರ್ಧಾಂಗಿ; ಪ್ರೇಯಸಿ...?*

ಅಂಗಿಯ ಬಾಬ್ತೇ ಇಲ್ಲ. ಟೀ ಶರ್ಟ್, ಚೂಡಿದಾರ್ ಟಾಪ್, ಶಾರ್ಟ್ ಟಾಪ್, ಮೈಕ್ರೋ ಟಾಪ್, ಮಿನಿ ಟಾಪ್, ಟಾಪ್ ಟಾಪ್....!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ನೀವು ರಾಮನೇ ಆದರೂ ಉತ್ತರಿಸುವಾಗ ದಶರಥನಾಗಿಬಿಡುತ್ತೀರಲ್ಲಾ...?*

ಲಕ್ಷಾಂತರ ಜನರ ಮನೋರಥಕ್ಕೆ ಸಾಟಿಯಾಗಬೇಕಲ್ಲ!

## ಬಹುಮಾನಿತ ಪ್ರಶ್ನೆ

ಶಿಲ್ಪಿ ರಮೇಶ್, ಹನುಮನಾಳು

*ಇಲ್ಲೊಬ್ಬಳು ನನ್ನನ್ನು ನರಳ್ತಾ ನರಳ್ತಾ ರೋಗ, ಹೊರಳ್ತಾ ಹೊರಳ್ತಾ ಏನು ಎಂದು ಕೇಳುತ್ತಿದ್ದಾಳಲ್ಲಾ ರಾಮ್?*

ಮಂಚದಿಂದ ಮುಗುಚಿಬಿದ್ದು, ಮೂಗು ಅಜ್ಜಿ ಬಜ್ಜಿಯಾಗಿ, ಮುಲುಗ್ತಾ ಮುಲುಗ್ತಾ ರಾಗ!

ಎಚ್. ಸಿದ್ಧಾರ್ಥ ಹೆಬ್ಬಾರ್, ಈದು

*ಬೆಲೆ ಏರಿಕೆ ಆಗದ ವಸ್ತು ಯಾವುದು?*

ಹೊಂದಿಕೊಂಡುಹೋಗುವ ಹೆಂಡತಿ.

ಕೆ. ಶ್ರೀನಿವಾಸರಾವ್, ಹರಪನಹಳ್ಳಿ

*ಯಡಿಯೂರಪ್ಪ, ದೇವೇಗೌಡರು ಹಾಗೂ ಖರ್ಗೆಯವರನ್ನು ಒಟ್ಟಿಗೆ ಸೇರಿಸಿ ಹಾಸ್ಯಮೇಳ ಪ್ರಾಯೋಜಿಸಬೇಕೆಂದಿದ್ದೇನೆ...?*

ಪ್ರಾಯೋಜಿಸುವುದೇನೂ ಬೇಡ, ಈ ಐಡಿಯಾ ಇದೆ ಎಂದು ಅಲ್ಲಲ್ಲಿ ಹೇಳಿ ಸಾಕು, ನೀವು ಹೇಳಿದಲ್ಲೆಲ್ಲಾ ನಗೆಯ ಅಲೆ ಎದ್ದೇ ಏಳುತ್ತದೆ!

ರೇಣುಕಾ, ಮೈಸೂರು

*ದುಡಿಮೆ ಇಲ್ಲದ ರಾಜಕಾರಣಿಗಳ ಹೆಂಡತಿಯರು ಗಂಡನಿಗಿಂತ ಸಿರಿವಂತರಾಗಿದ್ದಾರಲ್ಲಾ...?*



ಒಂದೇ ಬಾರಿಗೆ ಇಂತಹ ಲೂಟಿಕೋರರನ್ನೇ ಸಂಪಾದಿಸಿಬಿಟ್ಟಿದ್ದಾರಲ್ಲಾ, ಇದಕ್ಕಿಂತ ದೊಡ್ಡ ದುಡಿಮೆ ಇನ್ನಾವುದಿದ್ದೀತು ಮೇಡಮ್?

ಆರ್. ಮಧುಸೂದನ್, ಹಾಸನ

*ದೇವಾನುದೇವತೆಗಳೇ ಇಬ್ಬರು ಹೆಂಡತಿಯರ ಜೊತೆ ಸುಖ ಸಂಸಾರ ನಡೆಸುತ್ತಿರುವಾಗ ಮನುಷ್ಯರಿಗೇಕೆ ಇದು ಸಾಧ್ಯವಾಗುತ್ತಿಲ್ಲ?*

ದೇವನೂ ಸುಖವಾಗಿಲ್ಲ! ಶಿವನಿಗೆ ಪಾರ್ವತಿ ಕೂತೂ ಕೂತೂ ತೊಡೆ ಝೋಮು; ತಲೆಯಲ್ಲಿ ಗಂಗೆಯಿಂದ ವಿಪರೀತ ಥಂಡಿ!

ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್

*ಪಕ್ಷದಿಂದ ಪಕ್ಷಕ್ಕೆ ಜಿಗಿಯುವ ರಾಜಕಾರಣಿಗಳಿಗೂ, ಚಾನಲ್‌ನಿಂದ ಚಾನಲ್‌ಗೆ ಜಿಗಿಯುವ ಆ್ಯಂಕರ್‌ಗಳಿಗೂ ಏನು ವ್ಯತ್ಯಾಸ?*

ಆ್ಯಂಕರ್ ಎಲ್ಲಿಗೆ ಹೋದರೂ ಠೇವಣಿ ಕಳೆದುಕೊಳ್ಳುವುದಿಲ್ಲ.

■ ರಾಮ್